**ಟಿಪ್ಪಣಿಗಳು: ಮೂರು ಶರೀರಗಳು:** ಪ್ರತಿಯೊಬ್ಬ ಜೀವಿಗೂ ಮೂರು ಶರೀರಗಳಿವೆ. ೧. ಸ್ಥೂಲ, ೨. ಸೂಕ್ಷ್ಮ ಮತ್ತು ೩. ಕಾರಣ. ಮೇಲೆ ಕಾಣುವ ದೇಹ ಸ್ಥೂಲ ಶರೀರ. ಇಂದ್ರಿಯಗಳು, ಮನಸ್ಸು, ಬುದ್ಧಿ – ಇವೆಲ್ಲ ಸೇರಿ ಸೂಕ್ಷ್ಮ ಶರೀರ. ಕೇವಲ ಅವಿದ್ಯೆಯ ಆವರಣವಿದ್ದು, ತಾನೊಬ್ಬ ಪ್ರತ್ಯೇಕ ವ್ಯಕ್ತಿ ಎಂಬ ಭಾವ ಮೂಡುವುದು ಕಾರಣ ಶರೀರ. ಜಾಗೃತ ಅವಸ್ಥೆಯಲ್ಲಿ ಮೂರೂ ಶರೀರಗಳ ಅನುಭವ ಉಂಟಾಗುತ್ತದೆ. ಸ್ವಪ್ನದಲ್ಲಿ ಸೂಕ್ಷ್ಮ ಮತ್ತು ಕಾರಣ ಶರೀರಗಳ ಅನುಭವ. ಸುಷುಪ್ತಿಯಲ್ಲಿ ಕೇವಲ ಕಾರಣಶರೀರದ ಅನುಭವ. ಆತ್ಮನಿಗೆ ಇವು ಮೂರೂ ಉಪಾಧಿಗಳು. ಆತ್ಮನ ನೈಜ ಸ್ವರೂಪದಲ್ಲಿ ಇವು ಮೂರೂ ಇಲ್ಲ.

**ಭಾಷ್ಯ : *ಕವಿಃ* ಕ್ರಾಂತದರ್ಶೀ ಸರ್ವದೃಕ್, 'ನಾನ್ಯೋಽತೋಽಸ್ತಿ ದ್ರಷ್ಟಾ' (ಬೃ. ಉ. ೩ : ೭ : ೨೩) ಇತ್ಯಾದಿಶ್ರುತೇಃ। *ಮನೀಷೀ* ಮನಸ ಈಷಿತಾ, ಸರ್ವಜ್ಞ ಈಶ್ವರ ಇತ್ಯರ್ಥಃ। *ಪರಿಭೂಃ* ಸರ್ವೇಷಾಂ ಪರಿ ಉಪರಿ ಭವತೀತಿ ಪರಿಭೂಃ। *ಸ್ವಯಂಭೂಃ* ಸ್ವಯಮೇವ ಭವತೀತಿ, ಯೇಷಾಮುಪರಿ ಭವತಿ ಯಶ್ಚೋಪರಿ ಭವತಿ ಸ ಸರ್ವಃ ಸ್ವಯಮೇವ ಭವತೀತಿ ಸ್ವಯಂಭೂಃ। ಸ ನಿತ್ಯಮುಕ್ತ ಈಶ್ವರಃ *ಯಾಥಾತಥ್ಯತಃ* ಸರ್ವಜ್ಞತ್ವಾತ್ ಯಥಾತಥಾಭಾವಃ ಯಾಥಾತಥ್ಯಂ, ತಸ್ಮಾತ್ ಯಥಾಭೂತಕರ್ಮಫಲಸಾಧನತಃ *ಅರ್ಥಾನ್* ಕರ್ತವ್ಯಪದಾರ್ಥಾನ್ *ವ್ಯದಧಾತ್* ವಿಹಿತವಾನ್, ಯಥಾನುರೂಪಂ ವ್ಯಭಜತ್ ಇತ್ಯರ್ಥ। *ಶಾಶ್ವತೀಭ್ಯಃ* ನಿತ್ಯಾಭ್ಯಃ *ಸಮಾಭ್ಯಃ* ಸಂವತ್ಸರಾಖ್ಯೇಭ್ಯಃ ಪ್ರಜಾಪತಿಭ್ಯ ಇತ್ಯರ್ಥಃ।**


**ಕವಿಃ** ಎಂದರೆ  ಆಚೆಗೆ ನೋಡುವವನು, ಎಲ್ಲವನ್ನೂ ನೋಡುವವನು ಎಂದರ್ಥ. ಇದಕ್ಕೆ ಶ್ರುತಿ ಪ್ರಮಾಣವೂ ಇದೆ. **'ನಾನ್ಯೋಽತೋಽಸ್ತಿ ದ್ರಷ್ಟಾ'** (ಬೃ. ಉ. ೩ : ೭ : ೨೩) : 'ಇವನಿಗಿಂತ ಬೇರೆ ನೋಡುವವನು ಬೇರೆ ಯಾರೂ ಇಲ್ಲ' ಎಂದು ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ. **ಸ್ವಯಂಭೂಃ** = ತನಗೆ ತಾನೇ ಉಂಟಾಗುವವನು. ಯಾವ ಜೀವಿಗಳನ್ನು ಅವನು ಮೀರಿಹೋಗಿದ್ದಾನೆಯೋ, ಆ ಜೀವಿಗಳು ಅವನ ಸ್ವರೂಪವೇ ಆಗಿವೆ. ಇದೇ ಸಂದರ್ಭದಲ್ಲಿ ಅವುಗಳೆಲ್ಲವನ್ನೂ ಮೀರಿಹೋಗಿರುವವನೂ ಅವನೇ.  ಹೀಗಾಗಿ ಅವನನ್ನು ಸ್ವಯಂಭೂ ಎಂದು ಕರೆಯಲಾಗಿದೆ. ಅಂಥ ನಿತ್ಯವೂ ಮುಕ್ತಸ್ವಭಾವವುಳ್ಳ ಜಗದೊಡೆಯನಾದ ಈಶ್ವರನೇ ಇವನು. **ಯಾಥಾತಥ್ಯತಃ** = ಈಶ್ವರನು ಸರ್ವಜ್ಞನು. ಹೀಗಾಗಿ ಅವನಿಗೆ ಯಥಾತಥಾಭಾವವಿದೆ. ಅಂದರೆ ಯಾವುದು ಹೇಗೆ ಇದೆಯೋ, ಅದನ್ನು ಅದೇ ರೀತಿ ತಿಳಿದುಕೊಳ್ಳುವ ಸಾಮರ್ಥ್ಯ. ಹೀಗಾಗಿ ಅವನು ಯಾವ ಯಾವ ಕರ್ಮಗಳಿಗೆ ಯಾವ ಯಾವ ಫಲಗಳು ಉಂಟಾಗುತ್ತವೆ ಎನ್ನುವುದನ್ನು ಸರಿಯಾಗಿ ತಿಳಿದುಕೊಂಡಿರುತ್ತಾನೆ. ಈ ಸತ್ಯಭಾವದ ಕಾರಣದಿಂದಾಗಿ, **ಅರ್ಥಾನ್ ವ್ಯದಧಾತ್** = ಕರ್ತವ್ಯಗಳನ್ನು ಹಂಚಿಕೊಟ್ಟನು. (ಯಾರಿಗೆ ವಿಭಾಗ ಮಾಡಿಕೊಟ್ಟನು?) **ಶಾಶ್ವತೀಭ್ಯಃ ಸಮಾಭ್ಯಃ** = (ವ್ಯಾವಹಾರಿಕ ನೆಲೆಯಲ್ಲಿ) ನಿತ್ಯವಾಗಿರುವ, ಸಂವತ್ಸರಗಳು ಅಥವಾ ವರ್ಷಗಳಿಗೆ ವಿಭಾಗಮಾಡಿಕೊಟ್ಟನು. ಸಂವತ್ಸರಗಳು ಎಂಬ ಹೆಸರಿನ  ಪ್ರಜಾಪತಿಗಳಿಗೆ ಅವರವರ ಕೆಲಸಕಾರ್ಯಗಳನ್ನು ವಿಂಗಡಿಸಿಕೊಟ್ಟನು ಎಂದರ್ಥ.


**ಟಿಪ್ಪಣಿಗಳು:**

**ಸ್ವರೂಪ ಲಕ್ಷಣ ಮತ್ತು ತಟಸ್ಥ ಲಕ್ಷಣ :** ಯಾವ ಅಂಶಗಳು ಇಲ್ಲದಿದ್ದರೆ, ಆ ವಸ್ತುವೇ ಇರುವುದಿಲ್ಲವೋ ಅವುಗಳು ಆ ವಸ್ತುವಿನ ಸ್ವರೂಪ ಲಕ್ಷಣಗಳು. ಉದಾಹರಣೆಗೆ ಸಕ್ಕರೆಯ ಸಿಹಿಭಾವ. ಸಿಹಿ ಇಲ್ಲದಿದ್ದರೆ ಅದನ್ನು ಸಕ್ಕರೆ ಎಂದು ನಾವು ಕರೆಯುವುದೇ ಇಲ್ಲ. ಆ ಸಕ್ಕರೆ ಬಿಳಿಬಣ್ಣದ್ದಾಗಿರಬಹುದು, ಅಥವಾ ಸ್ವಲ್ಪ ಕಂದು ಬಣ್ಣದ್ದಾಗಿರಬಹುದು. ಬಣ್ಣವು ಸಕ್ಕರೆಯ ಗುಣ. ಅದು ಅದರ ಸ್ವಭಾವವಲ್ಲ. ಆದರೆ ಸಿಹಿ ಸಕ್ಕರೆಯ ಸ್ವಭಾವವನ್ನು ನಿರ್ಧರಿಸುವ ಅಂಶ. ಇಲ್ಲಿ ಆತ್ಮ ಅಥವಾ ಬ್ರಹ್ಮದ ಸ್ವಭಾವವನ್ನು ಹೇಳುವ ಅಂಶಗಳು ಸ್ವರೂಪಲಕ್ಷಣಗಳು. ಯಾವ ಗುಣವೂ ಇಲ್ಲದ ಆತ್ಮನಿಗೆ ಉಪಾಧಿಯ ಮೂಲಕ ಗುಣವನ್ನು ಆರೋಪಿಸಿ ಹೇಳುವುದು ತಟಸ್ಥ ಲಕ್ಷಣ. ಉದಾಹರಣೆಗೆ ಬ್ರಹ್ಮವು ಜಗತ್ತಿನ ಈಶ್ವರ ಎನ್ನುವುದು. ಅದು ವ್ಯಾವಹಾರಿಕ ನೆಲೆಯಲ್ಲಿ ಮಾತ್ರ ಸಾಧ್ಯ. ಅಲ್ಲಿ ಪ್ರಪಂಚ ಎಂಬ ಉಪಾಧಿಯನ್ನು ಪರಿಗಣಿಸಿ ಬ್ರಹ್ಮನಿಗೆ ಅದರ ಒಡೆಯ ಎಂಬ ಗುಣವನ್ನು ಹೇಳುತ್ತೇವೆ. ಈಶೋಪನಿಷತ್ತಿನ ಈ ಮೇಲಿನ ಮಂತ್ರದಲ್ಲಿ ಎರಡೂ ರೀತಿಯ ಲಕ್ಷಣಗಳನ್ನು ಹೇಳಿರುವುದನ್ನು ಗಮನಿಸಬಹುದು.

**ಅರ್ಥಾನ್ ವ್ಯದಧಾತ್ ಶಾಶ್ವತೀಭ್ಯಃ ಸಮಾಭ್ಯ :** ನಿತ್ಯರಾದ ಸಂವತ್ಸರಗಳೆಂದು ಕರೆಯಲ್ಪಡುವ ಪ್ರಜಾಪತಿಗಳಿಗೆ  ಕರ್ತವ್ಯಗಳನ್ನು ಹಂಚಿಕೊಟ್ಟನು : ಇಲ್ಲಿ ಆತ್ಮನ ಸಗುಣರೂಪವಾದ ಈಶ್ವರನ ಲಕ್ಷಣವನ್ನು ಉಪನಿಷತ್ತು ಬಣ್ಣಿಸುತ್ತದೆ. ಜಗತ್ತಿನ ಸೃಷ್ಟಿಕರ್ತನು ಅವನು. ಇದಲ್ಲದೆ, ಜಗತ್ತಿನ ಎಲ್ಲರಿಗೂ ಅವರವರ ಕರ್ಮಗಳಿಗೆ ಅನುಸಾರವಾಗಿ ಫಲಗಳನ್ನು ನೀಡುತ್ತಾನೆ. ಹೀಗಾಗಿ ಅವನನ್ನು ಕರ್ಮಾಧ್ಯಕ್ಷ ಎಂದು ಕರೆಯುತ್ತಾರೆ. ಇದಲ್ಲದೆ ಲೋಕದ ಹಲವಾರು ಕಾರ್ಯಗಳನ್ನು ನಿರ್ವಹಿಸುವ ಪ್ರಜಾಪತಿಗಳು ಎಂಬ ಅಧಿಕಾರಿಗಳಿಗೆ ಅವರವರ ಪೂರ್ವ ಕರ್ಮದ ಅನುಸಾರವಾಗಿ ಕರ್ತವ್ಯಗಳನ್ನು ವಿಭಾಗಮಾಡಿಕೊಡುವವನೂ ಅವನೇ. ಇದೆಲ್ಲ ಕಾರ್ಯಗಳನ್ನೂ ಈಶ್ವರನು ಮಾಡುತ್ತಾನೆ. ಪಾರಮಾರ್ಥಿಕವಾಗಿ ಈಶ್ವರ ಬೇರೆಯಲ್ಲ, ಪರಬ್ರಹ್ಮ ಬೇರೆಯಲ್ಲ. ವ್ಯಾವಹಾರಿಕ ನೆಲೆಯಲ್ಲಿ, ಉಪಾಧಿಯ ಸಂಬಂಧದಿಂದ ಪರತತ್ತ್ವವು ಈಶ್ವರ ಎಂಬ ಹೆಸರನ್ನು ಪಡೆದುಕೊಳ್ಳುತ್ತದೆ ಅಷ್ಟೇ. ಅತ್ಯಂತ ಉನ್ನತ ಉಪಾಧಿರಹಿತ ನೆಲೆಯಲ್ಲಿ ಈ ತತ್ತ್ವವನ್ನು ನಿರ್ಗುಣ ಬ್ರಹ್ಮ ಎಂದು ಕರೆಯುತ್ತೇವೆ.

*(ಮುಂದುವರಿಯುವುದು)*


ಸಂತ ತ್ಯಾಗರಾಜರು
ಕಥೆ: ಪ್ರದೀಪ್
ಚಿತ್ರ: ಶಂಕರ್
ಶರಭೋಜನು ಸ್ಥಳೀಯ ರಾಜನಾಗಿದ್ದಾಗ ತ್ಯಾಗರಾಜರು ತಿರುವಾರೂರಿನಲ್ಲಿ ಜನ್ಮವೆತ್ತಿದರು. ತಿರುವಾರೂರಿನ ದೇವರ ಹೆಸರೇ ತ್ಯಾಗರಾಜ.
①
ಅವನು ತುಂಬ ಚಿಕ್ಕವನಾಗಿದ್ದಾಗಲೇ ತನ್ನ ತಂದೆತಾಯಿಯರನ್ನು ಕಳೆದುಕೊಂಡನು. ಬಡತನದಿಂದಾಗಿ ಅವನು ತನ್ನ ಬಂಧುಗಳಿದ್ದ ತಿರುವೈಯಾರಿಗೆ ಬಂದನು.
②
ಚಿಕ್ಕಂದಿನಿಂದಲೇ ಅವನು ದೊಡ್ಡ ಶ್ರೀರಾಮಭಕ್ತನಾಗಿದ್ದನು. ಗೋಡೆಯ ಮೇಲೆಲ್ಲ 'ಶ್ರೀರಾಮ, ಶ್ರೀರಾಮ' ಎಂದು ಬರೆಯುತ್ತಿದ್ದನು.
③
ಅವನಿಗೆ ಶ್ರೀರಾಮನಲ್ಲಿದ್ದ ಭಕ್ತಿಯನ್ನು ನೋಡಿ, ರಾಮಕೃಷ್ಣ ಎಂಬ ಸಂನ್ಯಾಸಿ ಅವನಿಗೆ ಶ್ರೀರಾಮಮಂತ್ರ ದೀಕ್ಷೆಯನ್ನು ಕೊಟ್ಟನು.
ಮಗು, ನೀನು ಈ ಮಂತ್ರವನ್ನು ತೊಂಬತ್ತಾರು ಕೋಟಿ ಸಲ ಜಪ ಮಾಡಿದರೆ ನಿನ್ನ ಜೀವನ ಧನ್ಯವಾಗುವುದು.
④



ತ್ಯಾಗರಾಜರು ಜಪ ಮಾಡುವುದಷ್ಟೇ ಅಲ್ಲದೆ, ಶ್ರೀರಾಮನ ಮೇಲೆ ಯಥೇಚ್ಛವಾಗಿ ಹಾಡುಗಳನ್ನು ರಚಿಸಿ, ಅವುಗಳನ್ನು ತನ್ನ ಮನೆಯಲ್ಲಿದ್ದ ಶ್ರೀರಾಮ ಹಾಗೂ ಸೀತೆಯ ವಿಗ್ರಹಗಳ ಮುಂದೆ ಭಕ್ತಿಪರವಶನಾಗಿ ಹಾಡುತ್ತಿದ್ದರು.
5
ಒಮ್ಮೆ ಅವರ ಮನೆಗೆ ಒಬ್ಬ ಸಾಧು ಬಂದನು.
ಸ್ವಾಮೀಜಿ, ದಯವಿಟ್ಟು ಇಂದು ನಮ್ಮ ಮನೆಯಲ್ಲಿ ತಾವು ಭೋಜನ ಸ್ವೀಕರಿಸಬೇಕು.
6
ಸರಿ, ನೀನು ಈ ಓಲೆ ಗ್ರಂಥವನ್ನು ಜೋಪಾನವಾಗಿ ನಿನ್ನ ಮನೆಯಲ್ಲಿ ಇಟ್ಟಿರು. ನಾನು ಕಾವೇರಿ ನದಿಗೆ ಹೋಗಿ ಸ್ನಾನ ಮಾಡಿ ಬರುತ್ತೇನೆ.
ಆ ಸಾಧು ಬಹಳ ಹೊತ್ತಾದರೂ ಹಿಂದಿರುಗಿ ಬರಲಿಲ್ಲ. ತ್ಯಾಗರಾಜರು ಬಹಳ ಹೊತ್ತು ಕಾದು ನಿದ್ರೆ ಹೋದರು. ಆಗ ಕನಸಿನಲ್ಲಿ ನಾರದಮುನಿ ಅವರ ಮುಂದೆ ಪ್ರತ್ಯಕ್ಷರಾದರು.
7
ತ್ಯಾಗರಾಜ, ಆ ಸಂನ್ಯಾಸಿ ಕೊಟ್ಟಿರುವ ಹಸ್ತಪ್ರತಿಯನ್ನು ಓದು. ಅದರಲ್ಲಿ ಶ್ರೀರಾಮನ ಕೀರ್ತಿಯನ್ನು ಹೊಗಳುವ ಹಲವಾರು ಹಾಡುಗಳಿವೆ. ಅದನ್ನು ತನ್ನ ಮನಸ್ಸಿಗೆ ತೃಪ್ತಿಯಾಗುವಷ್ಟು ಹಾಡು.
ಇಂದು ನಾನು ನಾರದರ ದರ್ಶನ ಪಡೆದು ಧನ್ಯನಾದೆ.
ಭಕ್ತಿಪೂರ್ವಕವಾಗಿ ಹಾಡುವುದರಿಂದ ಭಗವಂತನನ್ನು ಕಾಣಬಹುದು ಎಂದು ತ್ಯಾಗರಾಜರು ದೃಢವಾಗಿ ನಂಬಿದ್ದರು. ಅವರ ಕೀರ್ತಿ ಎಲ್ಲೆಡೆ ಹರಡುತ್ತಿತ್ತು. ಅಲ್ಲಿಯ ರಾಜನಾದ ಶರಭೋಜನು ತನ್ನ ಅರಮನೆಯಲ್ಲಿ ಅವರನ್ನು ಆಸ್ಥಾನ ವಿದ್ವಾಂಸನನ್ನಾಗಿ ಇಟ್ಟುಕೊಳ್ಳಲು ನಿರ್ಧರಿಸಿದನು. ಅದಕ್ಕಾಗಿ ರಾಜದೂತರ ಮೂಲಕ ಅನೇಕ ಉಡುಗೊರೆಗಳನ್ನು ಅವರ ಬಳಿಗೆ ಕಳುಹಿಸಿದನು.
8